ಶ್ರೀ ಎಂ. ಶ್ರೀನಿವಾಸ್:– ಮಾನ್ಯ ಅಧ್ಯಕ್ಷರೆ, ಮೊನ್ನೆ ನಡೆದಂತಹ ಮೀಟಿಂಗ್‌ನಲ್ಲಿ ಭಾರತದೇಶದಲ್ಲಿಯೇ ಉತ್ತರ ಹಳ್ಳಿ ಕ್ಷೇತ್ರದಲ್ಲಿ ಸುಮಾರು 10 ಲಕ್ಷ ಜನಸಂಖ್ಯೆ ಇದೆ. ಮತದಾರರು ಸುಮಾರು ಆರುಲಕ್ಷ ಮೂವತ್ತಾರು ಜನ ಇದ್ದಾರೆ. ಉತ್ತರ ಹಳ್ಳಿ ಕ್ಷೇತ್ರ ಅಂದರೆ ಬೆಂಗಳೂರು ಸುತ್ತ ಜಯನಗರ ಬಸವೇಶ್ವರನಗರ ಎಲ್ಲಾ ಸೇರಿದೆ. ನಮ್ಮ ನೀರಿನ ವ್ಯವಸ್ಥೆ ಸಭೆಗೆ ನಮ್ಮನ್ನು ಕರೆಯಲಿಲ್ಲ. ಈ ಒಂದು ತಾರತಮ್ಯ ಏಕೆ ? ಮತ್ತು ನಮ್ಮ ಕ್ಷೇತ್ರದ ಬಗ್ಗೆ ಮಾತನಾಡುವುದಕ್ಕೆ ತಾವು ನನಗೂ ಅವಕಾಶ ಮಾಡಿಕೊಡಬೇಕು.

ಶ್ರೀ ಹೆಚ್.ಎನ್. ನಂಜೇಗೌಡ:– ಮಾನ್ಯ ಅಧ್ಯಕ್ಷರು ನಿಯಮದ ಪ್ರಕಾರ ಈ ವಿಷಯವನ್ನು ಚರ್ಚೆಗೆ ಇಟ್ಟುಕೊಳ್ಳುತ್ತೇವೆ ಎಂದರೆ ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು:– ವಿಷಯದ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು ಇನ್ನೂ ಹಲವಾರು ಜನ ಸದಸ್ಯರು ಬೆಂಗಳೂರು ನಗರದಿಂದ ಬಂದಿರತಕ್ಕವರು ಈ ಚರ್ಚೆಯಲ್ಲಿ ಪಾಲ್ಗೊಳ್ಳಬೇಕು ಎನ್ನತಕ್ಕ ಅವಶ್ಯಕತೆ ಇರುವುದರಿಂದ ಈ ವಿಷಯನ್ನು ನಾಳೆ 69ನೇ ನಿಯಮದಡಿಯಲ್ಲಿ ತೆಗೆದುಕೊಳ್ಳೋಣ. ಎಲ್ಲಾ ಸದಸ್ಯರು ಭಾಗವಹಿಸಲಿಕ್ಕೆ ಅವಕಾಶವಾಗುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ:– ಹಾಗಾದರೆ ಈ ಚರ್ಚೆಯನ್ನು ನಾಳೆ ಪ್ರಾರಂಭ ಮಾಡುತ್ತೇನೆ.

ಅಧ್ಯಕ್ಷರು:– ಶ್ರೀಯುತರುಗಳಾದ ಮಾಲಿಕಯ್ಯ ಗುತ್ತೇದಾರ್, ರಾಜ ವೆಂಕಟಪ್ಪ ನಾಯಕ್ ಹಾಗೂ ಸುಭಾಷ್ ಆರ್. ಗುತ್ತೇದಾರ್‌ರವರು ಗಮನ ಸೆಳೆಯುವ ಸೂಚನೆಯನ್ನು ಮಂಡಿಸತಕ್ಕದ್ದು.

2. 1994–95ನೇ ಹಿಂಗಾರು ಹಂಗಾಮಿಯಾಗಿ ಸಂಗ್ರಹಿಸಲ್ಪಟ್ಟ ಬಸವ ಸಾಗರ ಜಲಾಶಯದ ನೀರನ್ನು ಕೃಷ್ಣನದಿಗೆ ಬಿಟ್ಟಿರುವುದು.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ (ಅಫ್ಜಲ್‌ಪುರ):– ಮಾನ್ಯ ಅಧ್ಯಕ್ಷರೆ, 1994–95ನೇ ಹಿಂಗಾರು ಹಂಗಾಮಿಯಾಗಿ ಸಂಗ್ರಹಿಸಲ್ಪಟ್ಟ ಬಸವ ಸಾಗರ ಜಲಾಶಯದ ನೀರನ್ನು ಕೃಷ್ಣನದಿಗೆ ಬಿಟ್ಟು ಜಲಾಶಯ ಖಾಲಿ ಮಾಡಿರುವುದರ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, ನೀರಾವರಿ ಸಲಹಾ ಸಮಿತಿಯ ನಿರ್ಧಾರದಂತೆ ಬಸವ ಸಾಗರ ಜಲಾಶಯದಿಂದ ಹಿಂಗಾರು ಹಂಗಾಮಿನಲ್ಲಿ ಅರೆ ನೀರಾವರಿ ಬೆಳೆಯನ್ನು ಬೆಳೆಯಲು (ಶೇಂಗಾ ಬೆಳೆಯನ್ನು ನಿಷೇಧಿಸಿ) ಸೂಚನೆ ನೀಡಲಾಗಿತ್ತು. ಈ ಸೂಚನೆಗೆ ವ್ಯಾಪಕ ಪ್ರಚಾರವನ್ನೂ ಸಹ ನೀಡಲಾಯಿತು. ಸಲಹಾ ಸಮಿತಿಯ ನಿರ್ಣಯವನ್ನೂ ಯೋಜನಾ ಪ್ರವೇಶದ ಎಲ್ಲಾ ಮಾನ್ಯ ಸಚಿವರುಗಳಿಗೂ, ಲೋಕಸಭಾ ಸದಸ್ಯರುಗಳಿಗೂ ಮತ್ತು ಶಾಸನ ಸಭಾ ಸದಸ್ಯರುಗಳಿಗೂ, ವಿಭಾಗಾಧಿಕಾರಿಗಳಿಗೂ, ಜಿಲ್ಲಾಧಿಕಾರಿಗಳಿಗೂ ಹಾಗೂ ಕಾಡಾ ಆಡಳಿತಾಧಿಕಾರಿಗಳಿಗೂ ಕಳುಹಿಸಲಾಗಿದೆ. ಅಲ್ಲದೆ, ಈ ಬಗ್ಗೆ ಭಿತ್ತಿಪತ್ರಗಳನ್ನೂ ಸಹ ಎಲ್ಲಾ ಹಳ್ಳಿಗಳಿಗೆ ಹಾಗೂ ರೈತರಿಗೆ ಹಂಚಲಾಗಿದೆ. ಆದಾಗ್ಯೂ ರೈತರು ಡಿಸೆಂಬರ್ ಕೊನೆಯ ವಾರದಲ್ಲೂ ಸಹ ಶೇಂಗಾ ಬೆಳೆಯನ್ನು ಬಿತ್ತುತ್ತಿರುವುದು ಕಂಡುಬಂದಿದೆ.

ಅಧಿಸೂಚಿತ ಪ್ರದೇಶಗಳಿಗೆ 28–2–1995ರವರೆಗೆ ನೀರು ಬಿಡುವ ಕಾರ್ಯಕ್ರಮವಿದ್ದು ಇದರ ಅನುಸಾರ ಜಲಾಶಯದಲ್ಲಿ ನೀರಿನ ಲಭ್ಯತೆಯಿದೆ.

ಮುಂಗಾರು ಹಂಗಾಮಿನಲ್ಲಿ ರೈತರಿಗೆ ಸಮರ್ಪಕವಾಗಿ ನೀರನ್ನು ಪೂರೈಸಲಾಗಿದೆ.

ಅನಾವಶ್ಯಕವಾಗಿ ಗೇಟುಗಳನ್ನು ಎತ್ತಿ ನೀರು ಬಿಡಲಾಗಿದೆ ಎಂಬುದು ಸತ್ಯಕ್ಕೆ ದೂರವಾದುದು. ಅಣೆಕಟ್ಟಿನ ನಾಲ್ಕು ತೂಬುಗಳಿಂದ ನೀರು ಸೋರುತ್ತಿರುವುದು ವಾಸ್ತವಾಂಶ.

1992–93ರಲ್ಲಿ ರಾಯಚೂರು ಶಾಖೋತ್ಪನ್ನ ಉದ್ದಿಮೆಗೆ ನೀರನ್ನು ಬಿಡಲು ಆಣೆಕಟ್ಟಿನ ತೂಬಿನ ಬಾಗಿಲನ್ನು ತೆರೆದಾಗ ಅದನ್ನು ಮುಚ್ಚಲು ಸಾಧ್ಯವಾಗದೆ ಮರುವರ್ಷ ಆಣೆಕಟ್ಟಿನ ನೀರನ್ನು ಬಿಡಲು ಮಿತಿ ಇದ್ದುದರಿಂದ ದುರಸ್ತಿಯ ಕಾರ್ಯಮಾಡಲು ಸಾಧ್ಯವಾಗದೆ ಈ ಕೆಲಸವನ್ನು ಮುಂಬರುವ ಬೇಸಿಗೆ ಕಾಲದಲ್ಲಿ ಕೈಗೊಳ್ಳಲಾಗುತ್ತಿದೆ.

ಅಧಿಕೃತ ಬೆಳೆಗಳಿಗೆ ನೀರಿನ ನಿರ್ವಹಣೆಯನ್ನು ಸಮರ್ಪಕವಾಗಿ ನೆರೆವೇರಿಸುತ್ತಿರುವುದರಿಂದ ಅಧಿಕಾರಿಗಳ ಮೇಲೆ ಕ್ರಮಜರುಗಿಸುವ ವಿಚಾರವಿಲ್ಲ.

ಗೇಟುಗಳ ದುರಸ್ತಿ ಕೆಲಸವನ್ನು ಬರುವ ಬೇಸಿಗೆಯಲ್ಲಿ ತೆಗೆದುಕೊಳ್ಳುವ ಕಾರ್ಯಕ್ರಮವಿದ್ದು ಮೇ 1995ರಲ್ಲಿ ಮುಗಿಸಲು ಯೋಜಿಸಲಾಗಿದೆ.

ಈ ಹೇಳಿಕೆಯನ್ನು ಕೊಡತಕ್ಕಂಥ ಕಾಲದಲ್ಲಿ, 1992–93ರಲ್ಲಿ ಏನಾಯಿತು, ಮುಂದಕ್ಕೆ ಘಟನೆಗಳು ಏನು ಜರುಗಿದ್ದಾವೆ. ಈ ಎಲ್ಲಾ ವಿಷಯಗಳ ಬಗ್ಗೆ ಸಾಧ್ಯವಾದರೆ ನಾನೇ ಈ ಅಧಿವೇಶನ ಮುಗಿದಮೇಲೆ ಅಲ್ಲಿ ಅವಶ್ಯಕವಿದ್ದರೆ ಸ್ಥಳ ಪರಿಶೀಲನೆ ಮಾಡಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಆಶ್ವಾಸನೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಏನಾದರೂ ನ್ಯೂನ್ಯತೆಗಳು ಇದ್ದರೆ ಅದನ್ನೂ ಸಹ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ವಿ. ಗುತ್ತೇದಾರ್:– ಮಾನ್ಯ ಅಧ್ಯಕ್ಷರೆ, ಪ್ರತಿ ವರ್ಷ ಮಾರ್ಚ್ 30ರವರೆಗೆ ನೀರು ಬಿಡುತ್ತಿದ್ದರು. ಆದರೆ ಈ ವರ್ಷ ಅಧಿಕಾರಿಗಳು ಪ್ರಕಟಣೆ ಕೊಟ್ಟು ಫೆಬ್ರವರಿ 28ನೇ ತಾರೀಖಿನವರೆಗೆ ಕೂಡ ನೀರು ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಈಗ ಫೆಬ್ರವರಿ 28ರವರೆಗೂ ಕೂಡ ನೀರು ಬಿಡುವುದಕ್ಕೆ ಆ ಡ್ಯಾಂನಲ್ಲಿ ನೀರಿಲ್ಲ; ಏಕೆಂದರೆ ಸಿಲ್ಟ್ ಗೇಟ್‌ನಿಂದ ನೀರು ಲೀಕೇಜ್ ಆಗುತ್ತಿದೆ. ಅದನ್ನು ತಡೆಯುವುದಕ್ಕೆ ಅಧಿಕಾರಿಗಳು ಯಾವುದೇ ಒಂದು ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ:– ನಾನು ಈಗಾಗಲೇ ಹೇಳಿದ್ದೇನೆ. ಇದರಲ್ಲಿ ಏನಾದರೂ ನ್ಯೂನ್ಯತೆಗಳು ಇದ್ದರೆ ಸರಿಪಡಿಸುತ್ತೇನೆ ಎಂದು. ನಾವು ಬಂದು ಇನ್ನು ಎರಡು ವಾರವಾಗಿಲ್ಲ. ಇದರ ಬಗ್ಗೆ ನನಗೆ ಸರಿಯಾದ ವಿಷಯ ಗೊತ್ತಿಲ್ಲ. ಇದರ ಬಗ್ಗೆ ಅಧಿಕಾರಿಗಳನ್ನು ಸಭೆ ಕರೆದು ಚರ್ಚೆ ಮಾಡುತ್ತೇನೆ. ಅದರಲ್ಲಿ ಏನೇ ಲೋಪದೋಷಗಳು ಇದ್ದರೂ ಕೂಡ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಲ್ಲಿ ನೀರು ಇದ್ದರೆ ಕೊಡಿಸುವುದಕ್ಕೂ ಸಹ ಪ್ರಯತ್ನ ಮಾಡುತ್ತೇನೆ. ಈಗಾಗಲೇ ಮುಂಜಾಗ್ರತೆ ಕ್ರಮ ತೆಗೆದುಕೊಂಡು ಪಾರ್ಲಿಮೆಂಟ್ ಮೆಂಬರ್ಸ್‌ಗೆ, ಅಸೆಂಬ್ಲಿ ಮೆಂಬರ್ಸ್‌ಗೆ ಎಲ್ಲರಿಗೂ ಹೇಳಿದ್ದೇವೆ. ಇದರ ಬಗ್ಗೆ ನಾನು ಹೇಳಿಲ್ಲ. ಹಿಂದೆ ಹೇಳಿದ್ದಾರೆ. ಈ ಎರಡು ವಾರದಲ್ಲಿ ಇದನ್ನು ಏನು ಬದಲಾವಣೆ ಮಾಡಿಲ್ಲ. ಇದನ್ನು ನಾನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೇಳಬೇಕಾಗಿಲ್ಲ. ಆದರೂ ಒಂದು ಮಾತು ಹೇಳುವುದೇನೆಂದರೆ ಅಲ್ಲಿನ ರೈತರು ಏನು ಇವತ್ತು ಬೆಳೆಯನ್ನು ಬೆಳೆಯುವ ಆಸಕ್ತಿಯನ್ನು ತೋರಿಸಿ ಮುಂದೆ ಹೋಗಿದ್ದಾರೆ. ಅದಕ್ಕೆ ಅಲ್ಲಿ ನೀರು ಇದೆ ಎನ್ನುವುದು ನನ್ನ ಗಮನಕ್ಕೆ ಬಂದರೆ ಅಲ್ಲಿಯ ಬೆಳೆಗೆ ನೀರು ಕೊಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಎಂ.ವಿ. ಗುತ್ತೇದಾರ್:– ಮಾನ್ಯ ಮುಖ್ಯಮಂತ್ರಿಗಳು ಇವತ್ತು ಉತ್ತರ ಕೊಟ್ಟಿದ್ದೀರಿ. ಆದರೆ ಇದು ಏನಾಗಿದೆಯೆಂದರೆ, ಬೇಸಿಗೆಯಲ್ಲಿ ಆ ಸಿಲ್ಟ್ ಗೇಟ್ ತೆಗೆಯಬಹುದಿತ್ತು. ನೀರು ನಿಂತಾಗ ಆ ಸಿಲ್ಟ್ ಗೇಟ್ ತೆಗೆದು, 5 ಗೇಟ್ ಓಪನ್ ಮಾಡಿ ನಂತರ ಮೂರು ಗೇಟ್ ಮಾತ್ರ ಮುಚ್ಚುವುದಕ್ಕಾಯಿತು. ಇನ್ನು ಎರಡು ಹಾಗೇ ಓಪನ್ ಆಗಿದೆ. ಅಲ್ಲಿ ನೀರು ಹರಿದು ಹೋಗುತ್ತಿದೆ

ಎಂದು ನಮ್ಮ ಮಾನ್ಯ ಸ್ನೇಹಿತರು ಹೇಳುತ್ತಿದ್ದಾರೆ. ಇನ್ನು ಎರಡನೆಯದಾಗಿ ಏನಾಗಿದೆಯೆಂದರೆ, ಅಲ್ಲಿ ಕೆನಾಲ್‌ನಲ್ಲಿ ಏನು 20 ಟಿಎಂಸಿ ನೀರನ್ನು ಬಿಡುತ್ತಾರೆ. ಅದರಲ್ಲಿ ಹತ್ತು ಪರ್ಸೆಂಟ್ ಲೀಕೇಜ್ ಕೂಡ ಆಗುತ್ತಿದೆ. ಬೇಸಿಗೆಯಲ್ಲಿ ಅದನ್ನು ರಿಪೇರಿ ಮಾಡಿಸಬಹುದಿತ್ತು. ಈಗ ಅಧಿಕಾರಿಗಳು ಮಾಡಿರುವುದು ನೋಡಿದರೆ ಕಂಟ್ರಾಕ್ಟರ್‌ಗಳಿಗೆ ಅನುಕೂಲ ಆಗುವ ರೀತಿಯಲ್ಲಿ ಮಾಡಿದ್ದಾರೆ ಎನ್ನುವ ಭಾವನೆ ನಮ್ಮ ಮಾನ್ಯ ಸದಸ್ಯರಾದ ಹಾಗೂ ಆ ಭಾಗದ ಶಾಸಕರಾದ ರಾಜಾ ವೆಂಕಟಪ್ಪ ನಾಯಕ್‌ರವರ ಅನಿಸಿಕೆಯಾಗಿದೆ. ತಾವು ಇದರ ಬಗ್ಗೆ ವಿಶೇಷವಾಗಿ ಅಧಿಕಾರಿಗಳನ್ನು ಕರೆಯಿಸಿ ಮಾತನಾಡಿದರೆ ನಾವೆಲ್ಲಾ ಬರುತ್ತೇವೆ. ಇದು ನಮ್ಮ ರೈತರಿಗೆ ಬಹಳ ಗಂಭೀರವಾದಂತಹ ಪರಿಸ್ಥಿತಿ ಆಗಿದೆ. ಅಲ್ಲಿ ಈಗಾಗಲೇ ರೈತರು ಬೆಳೆ ಹಾಕಿದ್ದಾರೆ. ನೀರು ಬಿಡದಿದ್ದರೆ ಕೋಟ್ಯಾಂತರ ರೂಪಾಯಿಯ ಬೆಳೆ ಹಾನಿಯಾಗುತ್ತದೆ. ಅದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ನನ್ನ ವಿನಂತಿ.

ಶ್ರೀ ಹೆಚ್.ಡಿ. ದೇವೇಗೌಡ:– ನಿಮ್ಮ ಮನಸ್ಸಿನ ಭಾವನೆ ಏನೇ ಇರಲಿ. ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಿ. ಅಲ್ಲಿ 1992–93ರಲ್ಲಿ ಗೇಟ್ ಮುಚ್ಚುವುದಕ್ಕೆ ಆಗಲಿಲ್ಲ ಎಂದರೆ ಈಗ ಅದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ ಏನು ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೀರಿ, ಅದರ ಬಗ್ಗೆ ಕ್ರಮವನ್ನು ಜರುಗಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ. ಅಲ್ಲಿ ಏಕೆ ಆಗಲಿಲ್ಲ ಏನು ಎನ್ನುವುದೆಲ್ಲಾ ಈಗ ಬೇಡ. I am prepared to take any stern action, particularly against officers who are responsible for dereliction of their duty.

ಶ್ರೀ ರಾಜಾ ವೆಂಕಟಪ್ಪ ನಾಯಕ್:– ಮಾನ್ಯ ಅಧ್ಯಕ್ಷರೆ, ಬಸವಸಾಗರ ಡ್ಯಾಂನಿಂದ ಎಷ್ಟು ದಿವಸಗಳಲ್ಲಿ ನೀರು ಬಿಡುತ್ತೀರಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ:– ಈಗಾಗಲೇ ಸ್ಟೇಟ್‌ಮೆಂಟ್‌ನಲ್ಲಿ ಹೇಳಿದ್ದಾರೆ. ಎಂಎಲ್‌ಎ ಗಳಿಗೆ ರೈತರುಗಳಿಗೆ, ಕಾಡಾ ಛೇರ್‌ಮನ್‌ಗೆ, ಪಾರ್ಲಿಮೆಂಟ್ ಮೆಂಬರ್ಸ್‌ಗೆ, ಎಲ್ಲಾ ಟಾಂ ಟಾಂ ಹೊಡೆದು ಪತ್ರಿಕೆಯಲ್ಲಿ ಪ್ರಕಟಣೆ ಮಾಡಿ ಹಸ್ತ ಪತ್ರಿಕೆ ಹಂಚಿ, ನೀವು ಬೆಳೆ ಹಾಕಬೇಡಿ ಎಂದು ಹೇಳಿದರೂ ಕೂಡ ಹಾಕಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಅಲ್ಲಿ ನೀರು ಇದ್ದರೆ ರೈತರಿಗೆ ನೀರು ಬಿಡತಕ್ಕಂಥಾದ್ದರ ಬಗ್ಗೆ ವ್ಯವಸ್ಥೆ ಮಾಡುತ್ತೇವೆ. ನಮಗೆ ರೈತರ ಸ್ಥಿತಿಗತಿ ಬಗ್ಗೆ ಗೊತ್ತಿದೆ. ನೀರು ಇದ್ದರೆ ಕೊಡುವುದಕ್ಕೆ ನಾವು ಹಿಂದೆಮುಂದೆ ನೋಡುವುದಿಲ್ಲ. ಇನ್ನು ಏನಾದರೂ ಅಡಚಣೆ ಇದ್ದರೆ ಆಗ ನಿಮ್ಮನ್ನು ಕರೆದು ಚರ್ಚೆ ಮಾಡೋಣ.